ಊ) ನೇರ ನೇಮಕಾತಿಯ ಮುಖೇನ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ನಿರ್ಬಂಧ ಹಾಲಿ ಜಾರಿಯಲ್ಲಿರುವುದರಿಂದ ಇದನ್ನು ಸಡಿಲಿಸಿ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಋ) <u>ಸಮಾಜ ಕಲ್ಯಾಣ ಇಲಾಖೆ:</u> ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಾಂದ್ರತೆ ಹೆಚ್ಚಿಗೆ ಇರುವ ಶಾಲಾ, ಕಾಲೇಜುಗಳಲ್ಲಿ ಹೆಚ್ಚಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಇದ್ದು, ಆ ಸ್ಥಳದಲ್ಲಿ ವಿದ್ಯಾರ್ಥಿನಿಲಯಗಳು ಇವೆ. ವಿದ್ಯಾರ್ಥಿಗಳು ಹೆಚ್ಚಿಗೆ ಇದ್ದು, ಇನ್ನೂ ಬೇಡಿಕೆ ಇರುವ ಸ್ಥಳಗಳಲ್ಲಿ ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರವು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿ ನಡೆಸಲು ಕ್ರಮ ಕೈಗೊಳ್ಳುವುದು. 2004–05ರ ಸಾಲಿನಲ್ಲಿ 33 ಹೊಸ ವಿದ್ಯಾರ್ಥಿನಿಲಯಗಳನ್ನು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ.

<u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:</u> ಮುಂದಿನ ಸಾಲುಗಳಲ್ಲಿ ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಗಾಗಿ ಒದಗಿಸಲಾಗುವ ಆಯವ್ಯಯದ ಲಭ್ಯತೆಯನ್ನಾಧರಿಸಿ, ಹಂತ ಹಂತವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ಕ್ರಮವಹಿಸಲಾಗುವುದು.

1835(1946) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿಯ ಸಕ್ಕರೆ ಕಾರ್ಖಾನೆಗಳು ಎಷ್ಟು; ಸಹಕಾರ ವಲಯದಲ್ಲಿ ಇರುವಂತಹ ಒಟ್ಟು ಕಾರ್ಖಾನೆಗಳ ಸಂಖ್ಯೆ ಎಷ್ಟು; ಹಾಗೂ ಖಾಸಗಿ ಸ್ವಾಮ್ಯದ ಖಂಡಸಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಯಾವ ಯಾವ ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿ ನಡೆಯುತ್ತಿವೆ ಮತ್ತು ನಷ್ಟದಲ್ಲಿ ನಡೆಯುತ್ತಿವೆ (ವಿವರ ಒಗಿಸುವುದು).

ಆ) ರೈತರು ಬೆಳೆದ ಕಬ್ಬಿಗೆ ಮಹಾರಾಷ್ಟ್ರ ರಾಜ್ಯದಂತೆ ಒಂದು ಟನ್‌ಗೆ 1200ನ್ನು ನಿಗದಿಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು.

ಇ) ರಾಜ್ಯವು ಈಗಾಗಲೇ ಕಾಫಿ ಬೆಳೆಗಾರರ, ತೊಗರಿ ಬೆಳೆಗಾರರ ಮಂಡಳಿಯನ್ನು ಸ್ಥಾಪನೆ ಮಾಡಿದಂತೆ ಸಕ್ಕರೆ ಮಂಡಳಿಯನ್ನು ಸ್ಥಾಪನೆ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಅಮರೇ ಗೌಡ ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿ 2 ಸಕ್ಕರೆ ಕಾರ್ಖಾನೆಗಳು ಹಾಗೂ ಸಹಕಾರ ವಲಯದಲ್ಲಿ 21, ಖಾಸಗಿ ವಲಯದಲ್ಲಿ 22 ಕಾರ್ಖಾನೆಗಳಿವೆ; 11 ಬಂಡಸಾರಿ ಖಾಸಗಿ ಸಕ್ಕರೆ ಕಾರ್ಖಾನೆಗಳು ಇವೆ.

ಲಾಭ/ನಷ್ಟಗಳ ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಆ) ರಾಜ್ಯ ಸರ್ಕಾರವು ಕಬ್ಬಿನ ಬೆಲೆಯನ್ನು ನಿಗದಿಪಡಿಸುವುದಿಲ್ಲ. ಆದರೆ, ಕೇಂದ್ರ ಸರ್ಕಾರವು ನಿಗದಿಪಡಿಸುವ ಕನಿಷ್ಠ ಶಾಸನಬದ್ಧ ಬೆಲೆಗೆ ಕಡಿಮೆ ಇಲ್ಲದಂತೆ ಕಾರ್ಖಾನೆಗಳು ಕಬ್ಬು ಬೆಲೆ ಪಾವತಿಸಬೇಕಾಗುತ್ತದೆ. ಆದುದರಿಂದ, ಮಹಾರಾಷ್ಟ್ರ ರಾಜ್ಯದಂತೆ ಒಂದು ಟನ್‌ಗೆ ರೂ.1200/– ನಿಗದಿಪಡಿಸುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ.

ಇ) ಇಲ್ಲ.

Statement of Profit and Loss of Co-operative Sugar Factories as on 31.3.2004

(Rs. in lakhs)

Sl. No.	Name of the factory	2003-04 Profit (+)	2003-04 Loss (-)	2003-04 Accumulated Loss
1	Bhadra SSK Ltd	-	937.24	2750.38
2	Bhagyalaxmi SSK	-	1273.51	8171.63
3	Bidar SSK	-	415.69	3870.65
4	Daksina Kannada SSK	-	507.52	4387.67
5	Doodhganga Krishan SSK	381.12	-	-
6	Ghataprabha SSK	-	370.96	652.20
7	Halasiddanatha SSK	-	473.10	2069.85
8	Hemavathy SSK	12.05	-	986.28
9	Hiranyakeshi SSK	-	785.07	785.07
10	Karnataka SSK	-	693.21	3215.83
11	Malaprabha SSK	-	711.73	1392.61
12	Nandi SSK	123.12	-	-
13	Pandavapura SSK	-	1227.67	12014.02
14	Raithara SSK	-	883.70	4086.67
15	Aland SSK	-	-	4054.93
16	Sri Sheerama SSK	-	148.91	2368.38
17	Krishna SSK	-	752.70	1923.48
18	Naranja SSK	-	1491.15	2095.00
19	Mahatma Gandhi SSK	-	673.52	673.52
20	Raibag SSK	-	1362.64	9892.42
21	Vanivilasa SSK	-	439.51	1453.14
	Total	**517.19**	**13149.83**	**65875.93**

THE STATEMENT INDICATING THE PROFIT OR LOSS OF THE GOVT. & PRIVATE SUGAR FACTORIES IN KARNATAKA STATE FOR THE YEAR ENDING 31-03-2004:-

(Rs.in lakhs)

Sl. No.	Name of the sugar factory	Profit	Loss	Accumulated Loss
01	M.P.M. Sugars, Bhadravathi	-	558.60	3353.79
02	Mysore Sugar Co, Ltd., Mandya	-	4021.85	-
03	Gangavathi Sugars, Pragathinagar	-	520.35	5765.12
04	Athani Farmers, Madabhavi	60.33	-	165.68
05	Bannari Amman Sugars, Alaganchi	187.09	-	-
06	Chamundeshwari Sugars, K.M.Doddi	-	864.20	-
07	Davangere Sugars, Kukkawada	-	314.28	314.28
08	Dhyanayogi Sugars, Hirebevanur	-	566.00	-
09	Devi Sugars*	*	*	*
10	Gem Sugars, Kundargi	42.96	-	-
11	Godavari Sugars. Sameerwadi	-	235.52	-
12	I.S.R. Chirtwadgi, Hospet	-	144.76	-
13	I.C.L. Sugars, Makavalli	35.75	-	-
14	Jamkhandi Sugars, Hirepadasalagi	-	1013.26	2559.57
15	Mahadeshwara Sugars Ltd., Kollegal*	*	*	*
16	Nirani Sugars, Mudhol	-	-	-
17	Prabhulingeshwara Sugars, Siddapura	-	183.89	1496.47

18	Renuka Sugars, Manoli	721.27	-	-
19	S.C.M. Sugars, Koppa **	**	**	**
20	Shamanur Sugars, Duggavathi	139.92	-	-
21	Sirguppa Sugars (Gowribidanur)*	*	*	*
22	Sirguppa Sugars(Desanur)*	*	*	*
23	Sundari Sugars, Kampli*	*	*	*
24	Ugar Sugar Works Ltd., Ugarkhurd	903.10	-	-
25	Venkateshwara Power Project, Bedkihal	-	391.11	-

N.B: Profit/Loss is taken after appropriation of interest, depreciation & Taxes.

* Factory did not work.

** New sugar Factory.

1836(2636) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜವಳಿ ಉದ್ಯಮಗಳು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿವೆ? ಅವುಗಳ ಆರ್ಥಿಕ ಸ್ಥಿತಿ ಸುಧಾರಿಸಲು ಏನು ಕ್ರಮ ತೆಗೆದುಕೊಂಡಿದೆ?

ಆ) ಸಹಕಾರ ವಲಯದಲ್ಲಿರುವ ಜವಳಿ ಉದ್ಯಮಗಳು ಆರ್ಥಿಕವಾಗಿ ಮುಗ್ಗಟ್ಟಿನಲ್ಲಿದ್ದು, ಅವುಗಳ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಸತೀಶ್ ಎಲ್.ಜಾರಕಿ ಹೊಳಿ (ಜವಳಿ ರಾಜ್ಯ ಸಚಿವರು):

ಅ) ಜವಳಿ ಇಲಾಖೆಯ ವ್ಯಾಪ್ತಿಯಲ್ಲಿ ಎರಡು ಉದ್ಯಮಗಳು ಇದ್ದು ಪುನರ್ ರಚನೆಗಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಯೋಜನೆಯನ್ನು ಸರ್ಕಾರ ಒಪ್ಪಿರುತ್ತದೆ. ರೇಷ್ಮೆ ಇಲಾಖೆಯಲ್ಲಿ ಏಳು ಉದ್ಯಮಗಳಿದ್ದು. ಆರ್ಥಿಕವಾಗಿ ಬಲಪಡಿಸಲು ಐದು ಉದ್ಯಮಗಳನ್ನು ವಿಲೀನಗೊಳಿಸಿ, ಎರಡು ಉದ್ಯಮಗಳನ್ನು ಮಾಡಲಾಗಿದೆ. ಈಗ ರೇಷ್ಮೆ ಇಲಾಖೆಯಲ್ಲಿ ನಾಲ್ಕು ಉದ್ಯಮಗಳು ಇರುತ್ತವೆ. ಈ ನಾಲ್ಕು ಉದ್ಯಮಗಳನ್ನು ಉನ್ನತೀಕರಿಸಲು ಸರ್ಕಾರವು ಈಗಾಗಲೇ ಅನುಮೋದನೆ ನೀಡಿರುತ್ತದೆ.

ಆ) ಸಹಕಾರ ವಲಯದಲ್ಲಿರುವ ಜವಳಿ ಉದ್ಯಮಗಳ ಅಭಿವೃದ್ಧಿಗೆ ಹಾಲಿ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಜೊತೆ, ಕೆಳಕಂಡಂತೆ ಕ್ರಮ ವಹಿಸಲಾಗಿದೆ.